# 3. ಔತಣಕ್ಕೆ ಕರೆ

ನಮ್ಮನ್ನು ಅಪರೂಪವಾಗಿ, ಆದರೂ ಆದರಪೂರ್ವಕವಾಗಿ ಮೂರ್ತಿ ಔತಣಕ್ಕೆ ಆಮಂತ್ರಿಸಿದ್ದ. ಎಷ್ಟೋ ದಿನಗಳಿಂದ ಮನೆಯ ಗೊಡ್ಡು ಸಾರನ್ನವನ್ನೆ ತಿಂದು ನನಗೂ ಸಾಕಾಗಿತ್ತು. ಅವನ ಒತ್ತಾಯದ ಕರೆಯನ್ನು ನಿರಾಕರಿಸದೆ ನಾನು ಸಪತ್ನೀಕನಾಗಿ ಹೋಗಲು ಸಂತೋಷದಿಂದ ಸಮ್ಮತಿಸಿದೆ.

ಅಂದು ಭಾನುವಾರವಾದರೂ ಬೇಗನೆ ಎದ್ದೆವು. ಊಟಕ್ಕೆ ಹೋಗುವಾಗ ಮನೆಯಲ್ಲಿ ಯಾಕೆ ಹೆಚ್ಚಾಗಿ ಉಪಹಾರ ಮಾಡಿಕೊಂಡು ಹೋಗುವುದು? ಇಲ್ಲೇ ಪುಷ್ಕಳವಾಗಿ ತಿಂಡಿತೀರ್ಥ ಮುಗಿಸಿಕೊಂಡು ಹೋದರೆ ಮೂರ್ತಿಯ ಮನೆಯ ಔತಣಕ್ಕೆ ಅನ್ಯಾಯಮಾಡಿದಂತಾಗುತ್ತದೆ ಎಂದು ಬಗೆದು ಲಘು ಉಪಹಾರದಿಂದಲೇ ತೃಪ್ತರಾಗಿ ಹೊರಟೆವು.

ಮೂರ್ತಿಯ ಮನೆ ಇರುವುದು ಮಲ್ಲೇಶ್ವರದ ಹದಿನೆಂಟನೇ ಕ್ರಾಸಿನಲ್ಲಿ ನಾವು ಇರುವುದು ಬಸವನಗುಡಿಯ ಕೊನೆಯಲ್ಲಿ. ಹನ್ನೆರಡು ಗಂಟೆಯೊಳಗಾದರೂ ಮನೆ ತಲುಪಬೇಕಲ್ಲಾ ಎಂದು ಒಂಭತ್ತು ಘಂಟೆಯ ಹೊತ್ತಿಗೆ ನಮ್ಮ ಉಪಹಾರವನ್ನು ಮುಗಿಸಿದೆವು. ಮಾಲಿನ 6 ಘಂಟೆಯಿಂದಲೇ ಹೊರಡುವ ಸನ್ನಾಹದಲ್ಲುದ್ಯುಕ್ತಳಾಗಿದ್ದಳು.

ಸೀತ ಹೊರಡುವ ಕಾಲದಲ್ಲಿ ಹಟಮಾಡಿದಳೆಂದು ಧೊಪ್, ಧೊಪ್ ಎಂದು ಬೆನ್ನಿನ ಮೇಲೆ ಎರಡು ಗುದ್ದಿದಳು. ರಾಗ ತಾರಕಕ್ಕೇರಿತು ನಿಲಾನ್ ಲಂಗ ಸಾಕೆಂದು ಮಾಲಿನ ಹೇಳಿದರೆ ಜರೀಲಂಗ ಬೇಕೆಂದು ಸೀತ ಸಂಗೀತ ಪ್ರಾರಂಭಿಸಿದಳು. ಅದಕ್ಕೊಪ್ಪಿ ಎರಡು ಜಡೆ ಹಾಕಿಸಕೊ ಎಂದರೆ, ''ಪೋನಿ ಟೈಲ್'' ಬೇಕು ಎಂದು ಪುನಃ ರಾಗ ತೆಗೆದಳು. ಅದ ವಿವಗಿದ ಮೇಲೆ ಉಪ್ಪಿಟ್ಟು ಇನ್ನೂ ಬೇಕೆನ್ನುತ್ತಾ ''ಹೋ'' ಎಂದು ಕಿರಿಚಿದಳು. ''ಊಟಕ್ಕೆ ಹೋಗುವಾಗ ಹೊಟ್ಟೆ ಬಿರಿಯುವಂತೆ ಇಲ್ಲೇ ತಿಂದುಕೊಂಡು ಹೋಗುವುದೇ ? ಸಾಕು ಎದ್ದೇಳು'' ಎಂದು ಮಾಲಿನಿ ಸಮಾಧಾನಪಡಿಸಿದಳು. ಅಂತೂ 10 ಘಂಟೆಗೆ ಮನೆಬಿಟ್ಟು ಬಸ್ ಸ್ಟ್ಯಾಂಡಿಗೆ ಹೋದೆವು.

ಭಾನುವಾರವೆಂದ ಮೇಲೆ ಬಸ್ಸಿಗಾಗಿ ನೂಕುನುಗ್ಗುಲು ಹೇಳ ಬೇಕಾಗಿಲ್ಲ, ಒಂದನೇ ನಂಬರ್ ಬಸ್ಸನ್ನು ಹಿಡಿದು ಗಾಂಧಿಬಜಾರ್‌ವರೆಗೆ ಹೋಗಿ, ಅಲ್ಲಿಂದ ಹನ್ನೊಂದನೇ ನಂಬರ್ ಬಸ್ಸಿನಲ್ಲಿ ಹೋಗಬೇಕಾಗಿತ್ತು. ಒಂದನೇ ನಂಬರ್ ಬಸ್ಸನ್ನು ಏರಲು ಮುಕ್ಕಾಲು ಘಂಟೆ ತಪಸ್ಸುಮಾಡ ಬೇಕಾಯಿತು. ಹನ್ನೊಂದು ಘಂಟೆಗೆ ಗಾಂಧಿಬಜಾರ್ ತಲುಪಿ ಹನ್ನೊಂದನೇ ನಂಬರ್ ಬಸ್ಸಿನ ಕ್ಯೂನಲ್ಲಿ ನಿಂತೆವು. ಆಗ ಬಂದಬಸ್ಸು ಪೂರ್ವಾರ್ಧ ಕ್ಯೂವನ್ನು ಹೊತ್ತು ಹೊರಟಿತು. ಇನ್ನೊಂದು ಬಸ್ಸಿನಲ್ಲಿ ನಾವು ಕುಳಿತೆವು. ಕಂಡಕ್ಟರ್ ಎಲ್ಲರಿಗೂ ಟಿಕೆಟ್ ಕೊಟ್ಟ, ನಾವು ಟಿಕೆಟ್ ತೆಗೆದುಕೊಂಡು ಭದ್ರವಾಗಿ ಕುಳಿತೆವು. ''ವಿದ್ಯುಚ್ಛಕ್ತಿ ನಿಂತರೆ ಟಿಕೆಟು ಹಣ ವಾಪಾಸು ಕೊಡಲಾಗುವುದಿಲ್ಲ, ಆದರೆ ಅದೇ ಟಿಕೆಟನ್ನು ಮುಂದಿನ ಪ್ರದರ್ಶನಕ್ಕೆ ಉಪಯೋಗಿಸಬಹುದು'' ಎಂದು ಚಲಚ್ಚಿತ್ರ ಮಂದಿರಗಳಲ್ಲಿ ಚಿತ್ರ ಪ್ರಾರಂಭವಾಗುವ ಮೊದಲೇ ಪರದೆಯಲ್ಲಿ ನೋಟೀಸು ತೋರಿಸುತ್ತಾರೆ. ಇದ್ದಕ್ಕಿದ್ದ ಹಾಗೆ ನೀರು ನಿಲ್ಲುವುದು, ಲೈಟು ಆರಿಹೋಗುವುದು ನಮ್ಮಲ್ಲಿ ಸರ್ವರೂ ಅನುಭವಿಸಬೇಕಾದ ಸಾಮಾನ್ಯ ಘಟನೆಗಳು. ಇದನ್ನರಿತು ನುರಿತ ಚಲಚ್ಚಿತ್ರ ಮಂದಿರಗಳ ಮಾಲೀಕರು ತಪ್ಪದೆ ಮುಂಜಾಗ್ರತೆ ಕೊಡುತ್ತಾರೆ.

ಇದ್ದಕ್ಕಿದ್ದ ಹಾಗೆ ಬಸ್ಸು ಮುಂದೆ ಹೊರಡದೆ ಸತ್ಯಾಗ್ರಹ ಹೂಡುವುದೂ ಸಾಮಾನ್ಯವೆ! ಇದಕ್ಕೆ ಪ್ರತ್ಯೇಕ ನೋಟೀಸು ಇಲ್ಲದಿದ್ದರೂ, ಟಿಕೇಟು ಪಡೆದ ಮೇಲೆ ಪ್ರಯಾಣ ಹೇಗಾದರೂ ಎಷ್ಟು ಹೊತ್ತಿಗಾದರೂ ಬಸ್ಸಿನಲ್ಲೇ ಮಾಡಬೇಕೆಂದು ಎಲ್ಲರಿಗೂ ತಿಳಿದ ವಿಷಯ. ಆದರೆ ಮುಂದಿನ ಬಸ್ಸಿನಲ್ಲೇ ಹೇಗಬೇಕೆಂಬ ನಿರ್ಬಂಧವೂ ಇಲ್ಲ, ಸಾಧ್ಯತೆಯೂ ಇಲ್ಲ, ಸ್ಥಳವಿದ್ದರೆ ಹೋಗಬಹುದು. ಇಲ್ಲವಾದರೆ ಪ್ರಯಾಣಿಕರನ್ನು ಹೊತ್ತು ಸತ್ಯಾಗ್ರಹ ಹೂಡಿದ ಆಚಲ ವಾಹನಕ್ಕೆ ನೇರವಾಗಿ ಹಳೆಯ ನಿರ್ಭಾಗ್ಯ ''ರಿಲೀಫ್'' ಬಸ್ಸೊಂದು ಬರುವವರೆಗೆ ಕಾಯಬೇಕು.

ನಮ್ಮನ್ನು ಹೊರಲು ಸಿದ್ಧವಾಗಿ ಬರಬೇಕಾಗಿದ್ದಂಥಾ ''ರಿಲೀಫ್'' ಬಸ್ಸಿಗಾಗಿ ಕಾಯಲೇಬೇಕಾಯಿತು. ಆ ಬಸ್ಸು ಬಂತು. ನಾವು ಅದರಲ್ಲಿನುಗ್ಗಿ ಕುಳಿತೆವು. ಕಂಡಕ್ಟರ್ ''ರೈಟ್'' ಎಂದ. ಬಸ್ಸು ''ಘರ್'' ಎಂದು ಹೊರಡುವ ಚಿನ್ಹೆ ತೋರಿಸಿತು, ಆದರೆ

ಮರುಕ್ಷಣದಲ್ಲೇ ಪುಸಕ್ಕೆಂದು ತಟಸ್ಥವಾಯಿತು. ಆಗ ನನ್ನ ಎದೆ ಧಸಕ್ಕೆಂದಿತು. ಈ ಬಸ್ಸೂ ಕೈಕೊಟ್ಟರೆ ಮಲ್ಲೇಶ್ವರ ಮುಟ್ಟುವುದೆಷ್ಟು ಹೊತ್ತಿಗೆ? ಪಾಪ ಮೂರ್ತಿ ನಮಗಾಗಿ ಕಾದು, ಕಾದು ಬೇಸರಪಟ್ಟು ಕೊಂಡಿರಬಹುದು ಎಂದು ಯೋಚಿಸಿದೆ. ಅಷ್ಟು ಹೊತ್ತಿಗೆ ಡ್ರೈವರ್ ಸಾಹೇಬ್ ಕಂಡಕ್ಟರ್ ಮಹಾಶಯನಿಗೆ ''ಸ್ವಲ್ಪ ತಳ್ಳಯ್ಯ'' ಎಂದ. ಕಂಡಕ್ಟರ್ ಮತ್ತೆ ಇನ್ನೆರಡು ಜನ ಪಕ್ಕದ ಬಸ್ಸಿನ ಕಂಡಕ್ಟರುಗಳು ಕೂಡಿ ಬಸ್ಸನ್ನು ತಳ್ಳಿದರು. ಬಸ್ಸು ಶಬ್ದ ಮಾಡಿತು. ನನಗೆ ಸಮಾಧಾನವಾಯಿತು. ಬಸ್ಸು ಹೊರಟಿತು.

ಬಸ್ಸು ಮಲ್ಲೇಶ್ವರವನ್ನು ತಲುಪುತ್ತದೋ ಇಲ್ಲವೋ ಎಂದು ಅನುಮಾನಿಸುತ್ತಿದ್ದೆ. ಹೇಗೂ 18ನೇ ಕ್ರಾಸ್ ತಲುಪಿದಾಗ ನಾನು ಸಮಾಧಾನದ ನಿಟ್ಟುಸಿರು ಬಿಟ್ಟೆ. ಬಸ್ಸಿನಿಂದ ಇಳಿದು ಮೂರ್ತಿಯ ಮನೆಗೆ ಅರ್ಧ ಮೈಲಿ ನಡೆದುಕೊಂಡು ಹೋಗಬೇಕು. ದಾರಿಯುದ್ದಕ್ಕೂ ಮಾಲಿನ ಶೀತಾಳಿಗೆ ''ಅಲ್ಲಿ ಗಂಭೀರವಾಗಿರಬೇಕು. ಅದು ಬೇಕು ಇದು ಬೇಕು ಎಂದು ಹಟ ಮಾಡಬಾರದು. ಹಾಕಿದ್ದನ್ನು ಚೆಲ್ಲದೆ ತಿನ್ನಬೇಕು.... ಇತ್ಯಾದಿ'' ಎಂದು ಹಿತೋಪದೇಶ ಮಾಡುತ್ತಾ ನಡೆದಳು.

ಮೂರ್ತಿಯ ಮನೆಯನ್ನು ತಲುಪಿದಾಗ ದಂಪತಿಗಳು ಸಾಲಾಂಕೃತರಾಗಿ ಮನೆಯಿಂದ ಹೊರಗೆ ಬರುತ್ತಿದ್ದರು. ಆಹಾ! ಏನು ಆದರ! ಏನು ಸೌಜನ್ಯ! ನಮ್ಮನ್ನು ಸ್ವಾಗತಿಸಲು ಬರುತ್ತಿದ್ದಾರೆಂದು ಸಂತೋಷಪಟ್ಟೆ ನಾನು.

''ಓಹೊಹೋ! ಏನು ರಾಯರೆ? ಈ ಬಿಸಿಲಿನಲ್ಲಿ ದಯಮಾಡಿಸಿದಿರಿ? ಬನ್ನಿ ಬನ್ನಿ'' ಎಂದ ಮೂರ್ತಿ, ಬಾಯಿ ಅಗಲ ಮಾಡುತ್ತಾ.

ನನ್ನ ಉತ್ಸಾಹಕ್ಕೆ, ಸಂತೋಷಕ್ಕೆ, ತಣ್ಣೀರೆರಚಿದಂತಾಯಿತು.

''ಏನೂ ಇಲ್ಲ, ಹೀಗೇ ಬಂದವು'' ಎಂದು ಹಲ್ಲು ಗಿಂಜಿದೆ.

''ಶಿವರಾಮಯ್ಯನ ಮನೆಯಲ್ಲಿ ಊಟಕ್ಕೆ ಕರೆದಿದ್ದಾರೆ. ಪರವಾಗಿಲ್ಲ ಒಂದು ಹತ್ತು ನಿಮಿಷ ಕುಳಿತುಕೊಳ್ಳೋಣ'' ಎಂದು ಪಡಸಾಲೆಗೆ ನಮ್ಮನ್ನು ಕರೆದುಕೊಂಡು ಹೋದ.

ನಾನು ಮುಳ್ಳಿನ ಮೇಲೆ ಕುಳಿತುಕೊಳ್ಳುವಂತೆ ಅವನು ತೋರಿಸಿದ ಕುರ್ಚಿಯಲ್ಲಿ ಕುಳಿತುಕೊಂಡೆ.

ಸೀತಾ ಅಷ್ಟರಲ್ಲಿ ರಾಗ ತೆಗೆದಳು.

''ಅಮ್ಮಾ ಹೊಟ್ಟೆ...'' ಮಾಲಿನಿಯ ಕೆರಳಿದ ಕಣ್ಣನ್ನು ನೋಡಿ ಅವಳ ಕೈ ತನ್ನ ಬೆನ್ನ ಮೇಲೆ ಬೀಳದಿರಲೆಂದು ಅಷ್ಟಕಷ್ಟೆ ಸುಮ್ಮನಾದಳು.

ಮೂರ್ತಿಯ ಭಾರ್ಯೆ ರಾಧಾ ''ಏನಂತೆ? ಏನು ಬೇಕು?'' ಎಂದು ವಿಚಾರಿಸಿದಳು.

ಮಾಲಿನಿ ''ಏನಿಲ್ಲ ಸ್ವಲ್ಪ ಹೊಟ್ಟೆನೋವಂತೆ. ಬೇಡ ಬೇಡ ಅಂದರೂ ತಿನ್ನುವುದು.'' ಎಂದು ಒಂದು ಸಂದರ್ಭೋಚಿತ ಬುರುಡೆ ಬಿಟ್ಟಳು.

ನನ್ನ ಹೊಟ್ಟೆಯೂ ತಾಳ ಹಾಕುತ್ತಿತ್ತು. ಆದರೆ ಪರಿಸ್ಥಿತಿ ಸಂಕಟಕರವಾಗಿತ್ತು. ನಿರಾಶಾದಾಯಕವಾಗಿತ್ತು.

''ಕಾಫಿ ಮಾಡಲೆ?'' ಎಂದು ಔಪಚಾರಕವಾಗಿ ಕೇಳಿದಳು ರಾಧಾ.

ಅವಸರವಾಗಿ ಹೊರಗೆ ಹೊರಡುವವರನ್ನು ನಿಲ್ಲಿಸಿ, ಕಾಫಿಮಾಡಿ ಕೊಟ್ಟು, ನಮ್ಮನ್ನು ಉಪಚರಿಸಿ, ಆ ಮೇಲೆ ನಿಧಾನವಾಗಿ ಹೋಗಿ ಎಂದು ಯಾವನು ತಾನೆ ಹೇಳ್ಯಾನು?

''ಏನೂ ಬೇಡ ಒಂದು ಲೋಟ ನೀರು ಕೊಡಿ. ಪಾಪ ನಿಮಗೆ ಹೊರಡುವ ಅವಸರ'' ಎಂದು ನಿರುಪಾಯರಾಗಿ ಬಿಕ್ಕೊರಳಿನಿಂದ ಹೇಳಿದೆವು.


ಹಸಿದ ಹೊಟ್ಟೆಯನ್ನು ಒಂದೊಂದು ಲೋಟ ನೀರಿನಿಂದ ತಣಿಸದೆವು. ನಾವು ಹೊರಡುವಾಗ ಮೂರ್ತಿ, ''ಬರುವ ಭಾನುವಾರ ಮರೆಯಬೇಡಿ. ಖಂಡಿತ ಬರಬೇಕು.'' ಎಂದು ಜ್ಞಾಪಿಸಿದ. ನಾನು ದುರ್ದಾನ ಹಿಡಿದ ಬ್ರಾಹ್ಮಣನಂತೆ ಹೊರಬಿದ್ದೆ.

ಆದರೂ ದೇಶಾವರಿ ನಗೆ ನಕ್ಕು ''ಆಗಲಿ ಬರುತ್ತೇವೆ ಎಂದೆ. ಆಗ ನನ್ನ ತಪ್ಪು ನನಗೆ ಅರಿವಾಯಿತು.'' ಮೂರ್ತಿ ನಮ್ಮನ್ನು ಆಮಂತ್ರಿಸಿದ್ದು ಅದಕ್ಕೆ ಮುಂದಿನ ಭಾನುವಾರ. ಇಪ್ಪತ್ತಲ್ಲ ಇಪ್ಪತ್ತೇಳಕ್ಕೆ ಎಂದು ಅಂದಿದ್ದ. ನಾನು ಇಪ್ಪತ್ತೇಳಲ್ಲ ಇಪ್ಪತ್ತಕ್ಕೆ ಎಂದು ತಿಳಿದುಕೊಂಡಿದ್ದೆ ಅಷ್ಟೆ.

ಕ್ಷುದ್ಬಾಧೆಯ ಜೊತೆಗೆ ಮಾಲಿನಿಯ ವಾಗ್ಬಾಣಗಳ ಬಾಧೆಯನ್ನು ಸಹಿಸುತ್ತಾ ಒಂದು ಊಟದ ಹೊಟೇಲಿಗೆ ಹೋದೆವು, ಅಲ್ಲಾದರೂ ಊಟ ಮುಗಿಸೋಣವೆಂದು ನೆನಸಿ. ಆದರೆ ನಮ್ಮ ದುರದೃಷ್ಟಕ್ಕೆ ಅಲ್ಲಿ ಊಟದ ಸಮಯ ಮಿಂಚಿಹೋಗಿತ್ತು. ಪಕ್ಕದ ರೆಸ್ಟೋರೆಂಟಿಗೆ ಹೋಗಿ ಹೊಟ್ಟೆ ತುಂಬದ ಏನೇನೋ ತಿಂಡಿಗಳನ್ನು ತಿಂದು, ಕಾಫಿ ಸೇವಿಸಿ ಬಸವನಗುಡಿಯ ಬಸ್ಸು ಹತ್ತಿ ಮನೆ ಸೇರಿದೆವು.

ನಾನು ಹಸಿವನ್ನು ಸಹಿಸುತ್ತಾ, ''ರಾತ್ರೆಯ ಊಟವನ್ನಾದರೂ ಬೇಗ ಮಾಡೋಣ'' ಎಂದಾಗ.

ರಾತ್ರೆ ಔತಣಕ್ಕೆ ಯಾರೂ ಕರೆಯಲ್ಲಿಲ್ಲವೆ?'' ಎಂದು ಮಾಲಿನಿ ಮೂದಲಿಸಿ ನಕ್ಕಳು.



## ಶಬ್ದಗಳ ಅರ್ಥ

ಔತಣ - ಊಟ; ಸಹಪತ್ನೀಕ - ಗಂಡ, ಹೆಂಡತಿ; ಭದ್ರ - ಗಟ್ಟಿ; ಕ್ಷುದ್ಬಾಧೆ - ಹೊಟ್ಟೆನೋವು; ವಾಗ್ಬಾಣ - ಹರಿತ ಮಾತು.

## ಅಭ್ಯಾಸ


**ಕೃತಿ 1) I. ಕೆಳಗೆ ಕೊಟ್ಟ ಜಾಲಾಕೃತಿಯನ್ನು ಪೂರ್ಣಗೊಳಿಸಿ ಬರೆಯಿರಿ.**

| ಸಾರ್ವಜನಿಕ ಸಾರಿಗೆ | ಸರಕು ಸಾರಿಗೆ | ಒಡೆತನದ ಸಾರಿಗೆ |
|---|---|---|
| ರಿಕ್ಷಾ | | |
| | | |
| | | ಕಾರು |
| | | |
| | ಟ್ರಕ್ | |

**II. ಇಂಗ್ಲಿಷ ಶಬ್ದಗಳಿಗೆ ಕನ್ನಡದಲ್ಲಿ ಅರ್ಥ ಬರೆಯಿರಿ.**

| | | |
|---|---|---|
| 1) | ಬಸ್‌ಸ್ಟ್ಯಾಂಡ್ | |
| 2) | ಕಂಡಕ್ಟರ್ | |
| 3) | ಕ್ಯೂ | |
| 4) | ಬಸ್ಸ್ | |

**III. ಬೆಂಗಳೂರಿನಲ್ಲಿರುವ ಪ್ರೇಕ್ಷಣೀಯ ಸ್ಥಳಗಳ ಹೆಸರು ಬರೆದು ಪೂರ್ಣಗೊಳಿಸಿರಿ..**




**ಕೃತಿ 2) ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಸಾಲುಗಳಲ್ಲಿ ಉತ್ತರ ಬರೆಯಿರಿ.**

1) ರಾಯರಿಗೆ ಏಕೆ ಸಂತೋಷವಾಗಿತ್ತು?

..........................................................................................

..........................................................................................

..........................................................................................

..........................................................................................

2) ಮೂರ್ತಿ ಮನೆಗೆ ಹೋಗುವಾಗ ರಾಯರ ಪರಿವಾರದವರಿಗೆ ಯಾವ ಅನುಭವಾಯಿತು ?

..........................................................................................................................................

..........................................................................................................................................

..........................................................................................................................................

..........................................................................................................................................

3) ರಾಯರ ಉತ್ಸಾಹಕ್ಕೆ ಏಕೆ ತಣ್ಣೀರೆರಚಿದಂತಾಯಿತು ?

..........................................................................................................................................

..........................................................................................................................................

..........................................................................................................................................

..........................................................................................................................................

**ಕೃತಿ 3) ಕೆಳಗೆ ಕೊಟ್ಟ ಅಕ್ಷರ ಸಮೂಹದಿಂದ ಅರ್ಥಪೂರ್ಣ ಶಬ್ದ ರಚಿಸಿರಿ.**

| ನಿಲಿಮಾ | ನವಸಬ | ರುಕಲೀಮಾ | ಳುಗತಿಪದಂ |
|---|---|---|---|
| | | | |

**ಕೃತಿ 4) ಕೆಳಗೆ ಕಂಸದಲ್ಲಿ ಕೊಟ್ಟ ಯೋಗ್ಯ ಪದವನ್ನು ಬಳಸಿ ವಾಕ್ಯ ಪೂರ್ಣಗೊಳಿಸಿ ಬರೆಯಿರಿ.**

1) ಸೀತಾ ಹೊರಡುವ ಕಾಲದಲ್ಲಿ ಹಟ ಮಾಡಿದಳೆಂದು ಧೊಪ್‌ಧೊಪ್ ಎಂದು ಬೆನ್ನಿನ ಮೇಲೆ ಎರಡು.............
(ಒದ್ದಳು, ಹೊಡೆದಳು, ನೂಕಿದಳು, ಗುದ್ದಿದಳು, ಕಚ್ಚಿದಳು)

2) ಚಲನಚಿತ್ರ ಮಂದಿರಗಳ ಮಾಲೀಕರು ತಪ್ಪದೆ ಮುಂಜಾಗ್ರತೆ .............
(ನೀಡುತ್ತಾರೆ, ಹೇಳುತ್ತಾರೆ, ಹಾಡುತ್ತಾರೆ, ಕೊಡುತ್ತಾರೆ, ಅಳುತ್ತಾರೆ, ನಗುತ್ತಾರೆ)

3) ಬಸ್ಸು............. ತಲುಪುತ್ತದೋ ಇಲ್ಲವೋ ಎಂದು ಅನುಮಾನಿಸುತ್ತಿದ್ದೆ.
(ಗಾಂಧಿ ಬಜಾರ್, ಲಾಲ್‌ಬಾಗ್, ಕಬುತರಬಾಗ್, ಮಲ್ಲೇಶ್ವರಂ, ನೀಲೇಶ್ವರಂ)

4) ಶಿವರಾಮಯ್ಯನ ಮನೆಯಲ್ಲಿ............. ಕರೆದಿದ್ದಾರೆ.
(ತಿಂಡಿ ತಿನಿಸಕ್ಕೆ, ಅವಲಕ್ಕಿ ತಿನ್ನಲಿಕ್ಕೆ, ಮಜ್ಜಿಗೆ ಕುಡಿಯಲಿಕ್ಕೆ, ಊಟಕ್ಕೆ)

***

94BHJE